ANANTHKUMAR PRATISHTHANA

# ಅನಂತಪಥ

ಅನಂತ ಪಥ 75
ಸಂಭ್ರಮ

ಅನಂತಪಥ 75 ಅಮೃತ ಸಂಭ್ರಮ

ಸಂಪುಟ - 7 ಸೆಪ್ಟೆಂಬರ್ - 2026 ಸಂಚಿಕೆ - 75

# ಅನಂತಕುಮಾರ್: ಸೇವೆಯ ಪಥದಲ್ಲಿ ಅರಳಿದ ಬದುಕು

ವಿದ್ಯಾರ್ಥಿ ಚಳವಳಿಯ ಬೀದಿಗಳಿಂದ ರಾಷ್ಟ್ರ ರಾಜಕಾರಣದ ಉನ್ನತ ಹುದ್ದೆಗಳವರೆಗೆ, ಪಕ್ಷ ಸಂಘಟನೆಯ ತಾಳ್ಮೆಯ ಕೆಲಸದಿಂದ ಜನಪರ ಆಡಳಿತದ ದಿಟ್ಟ ನಿರ್ಧಾರಗಳವರೆಗೆ — ಅನಂತಕುಮಾರ್ ಅವರ ಬದುಕು ಹಲವು ಮಹತ್ವದ ಜವಾಬ್ದಾರಿಗಳ ಸಂಗಮ. ಸೆಪ್ಟೆಂಬರ್ 22ರ ಅವರ ಜನ್ಮದಿನದ ಸಂದರ್ಭದಲ್ಲಿ, ಆ ಬದುಕನ್ನು ರೂಪಿಸಿದ ಸಂಸ್ಕಾರ, ನಾಯಕತ್ವ ಮತ್ತು ಸೇವಾಮನೋಭಾವದ ಸ್ಮರಣೆ.



## ಸಂಸ್ಕಾರದ ಬೇರುಗಳು

ಅನಂತಕುಮಾರ್ ಅವರದ್ದು ವಿದ್ವಾಂಸರ ಹಾಗೂ ಸಮಾಜಸೇವಕರ ಕುಟುಂಬ. ಅವರ ಅಜ್ಜ ನರಹರಿ ಶಾಸ್ತ್ರಿಗಳು ಮೂಲತಃ ದೇವನಹಳ್ಳಿಯ ಹೆಗ್ಗನಹಳ್ಳಿಯವರು. ಹನ್ನೆರಡನೆಯ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಅವರು, ಸುಮಾರು ಇಪ್ಪತ್ತು ಜನರ ಕುಟುಂಬದ ಹೊಣೆ ಹೊತ್ತು ಮೈಸೂರಿಗೆ ಬಂದು ನೆಲೆಸಿದರು. ಓದು ಅರ್ಧಕ್ಕೇ ನಿಂತರೂ ಜ್ಯೋತಿಷ್ಯಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ, ಮೈಸೂರಿನ ಮಹಾರಾಜರ ಸಲಹೆಗಾರರಾಗುವ ಗೌರವವನ್ನು ಪಡೆದರು. ತಂದೆ ನಾರಾಯಣ ಶಾಸ್ತ್ರಿ ರೈಲ್ವೆ ಇಲಾಖೆಯ ಉದ್ಯೋಗಿ, ಕುಸ್ತಿಪಟು ಹಾಗೂ ಸಜ್ಜನರಾಗಿದ್ದರು. ತಾಯಿ ಗಿರಿಜಾ ಶಾಸ್ತ್ರಿ ವೈದ್ಯರು ಮತ್ತು ವಿದ್ವಾಂಸರ ಪ್ರತಿಷ್ಠಿತ ಕುಟುಂಬದಿಂದ ಬಂದವರು. ಎರಡೂ ಕಡೆಯಿಂದ ಅನಂತಕುಮಾರ್ ಅವರಿಗೆ ಸಿಕ್ಕಿದ್ದು ಲೌಕಿಕ ಶ್ರೀಮಂತಿಕೆಯಲ್ಲ; ಬದಲಿಗೆ ಜ್ಞಾನದಾಹ, ಕರ್ತವ್ಯಪ್ರಜ್ಞೆ ಮತ್ತು ಕಷ್ಟದಲ್ಲೂ ಘನತೆಯನ್ನು ಕಾಪಾಡುವ ಗುಣ.

ತಾಯಿ ಗಿರಿಜಾ ಶಾಸ್ತ್ರಿ ಅವರು ಅನಂತಕುಮಾರ್ ಅವರ ಬದುಕಿನ ಮೇಲೆ ಬೀರಿದ ಪ್ರಭಾವ ವಿಶೇಷವಾದದ್ದು. ಬಾಲ್ಯದಲ್ಲಿಯೇ ಭಗವದ್ಗೀತೆಯನ್ನು ಪರಿಚಯಿಸಿದ ಅವರು, ಮಗನಲ್ಲಿ ಆತ್ಮವಿಶ್ವಾಸ ಮತ್ತು ಧೈರ್ಯವನ್ನು ಬೆಳೆಸಿದರು. ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ಭಾಗವಹಿಸಲು ಮಗ ಹೊರಟಾಗಲೂ, ಅವರು ಧೈರ್ಯದಿಂದ ಬೀಳ್ಕೊಟ್ಟಿದ್ದರು. ಮಗನ ಸಾಮರ್ಥ್ಯದಲ್ಲಿ ತಾಯಿಗಿದ್ದ ಈ ಅಚಲ ನಂಬಿಕೆ, ಮುಂದೆ ಅನಂತಕುಮಾರ್ ಅವರು ಎದುರಿಸಿದ ಅನೇಕ ಸವಾಲುಗಳನ್ನು ದಾಟಲು ಮಾನಸಿಕ ಬಲವಾಗಿ ನಿಂತಿತು.

## ಸಂಘಟನೆಯ ಮೊದಲ ಪಾಠಗಳು

ವಿದ್ಯಾರ್ಥಿ ಜೀವನದಲ್ಲಿಯೇ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಅನಂತಕುಮಾರ್, ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿ ಜೈಲುವಾಸವನ್ನೂ ಅನುಭವಿಸಿದರು. ಹಿರಿಯ ಹೋರಾಟಗಾರರ ಒಡನಾಟ ಮತ್ತು ಆ ಕಾಲದ ಅನುಭವಗಳು ಪ್ರಜಾಪ್ರಭುತ್ವದ ಮಹತ್ವವನ್ನು ಇನ್ನಷ್ಟು ಆಳವಾಗಿ ಅರಿಯುವಂತೆ ಮಾಡಿದವು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮೂಲಕ ಆರಂಭವಾದ ಅವರ ಸಂಘಟನಾ ಪಯಣ, ವಿದ್ಯಾರ್ಥಿಗಳ ಸಮಸ್ಯೆಗಳ ಪರಿಹಾರದಿಂದ ಮೊದಲ್ಗೊಂಡು ರಾಷ್ಟ್ರೀಯ ವಿಚಾರಗಳ ಕುರಿತ ಜಾಗೃತಿಯವರೆಗೆ ವಿಸ್ತರಿಸಿತು. ಕರ್ನಾಟಕದ ಉದ್ದಗಲಕ್ಕೂ ಸಂಚರಿಸುತ್ತಾ ವಿದ್ಯಾರ್ಥಿಗಳನ್ನು ಸಂಘಟಿಸಿದ ಅವರು, ಕಾರ್ಯಕರ್ತರ ಮನೆಗಳಲ್ಲಿ ತಂಗಿ ಜನಸಾಮಾನ್ಯರ ಬದುಕನ್ನು ಹತ್ತಿರದಿಂದ ಕಂಡರು. ಶಿಕ್ಷಣದ ಸಮಸ್ಯೆಗಳು, ಅವಕಾಶಗಳ ಕೊರತೆ ಮತ್ತು ಯುವಜನರ ನಿರೀಕ್ಷೆಗಳನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡರು. ಪ್ರತಿಯೊಬ್ಬ ಕಾರ್ಯಕರ್ತನನ್ನೂ ಹೆಸರಿನಿಂದ ಗುರುತಿಸುವುದು, ಅವರ ಸಾಮರ್ಥ್ಯಕ್ಕೆ ತಕ್ಕ ಜವಾಬ್ದಾರಿ ನೀಡುವುದು ಮತ್ತು ಅಗತ್ಯವಿದ್ದಾಗ ಮಾರ್ಗದರ್ಶನ ಮಾಡುವುದು ಅವರ ಕಾರ್ಯವಿಧಾನದ ಅವಿಭಾಜ್ಯ ಅಂಗವಾಗಿತ್ತು. ಹೀಗೆ ಬೆಳೆದ ವೈಯಕ್ತಿಕ ವಿಶ್ವಾಸವೇ ಮುಂದಿನ ದಿನಗಳಲ್ಲಿ ಬಲಿಷ್ಠ ಸಂಘಟನೆಯಾಗಿ ರೂಪುಗೊಂಡಿತು.

ಭಾರತೀಯ ಜನತಾ ಪಕ್ಷದ ಜವಾಬ್ದಾರಿಗಳನ್ನು ವಹಿಸಿಕೊಂಡ ನಂತರವೂ ಅನಂತಕುಮಾರ್ ಇದೇ ಕಾರ್ಯಕರ್ತಕೇಂದ್ರಿತ ವಿಧಾನವನ್ನು ಮುಂದುವರಿಸಿದರು. ಬಿ.ಎಸ್. ಯಡಿಯೂರಪ್ಪ ಸೇರಿದಂತೆ ರಾಜ್ಯದ ಇತರ ನಾಯಕರೊಂದಿಗೆ ಕೈಜೋಡಿಸಿ, ಪಕ್ಷವನ್ನು ತಳಮಟ್ಟದಲ್ಲಿ ಬಲಪಡಿಸಲು ಶ್ರಮಿಸಿದರು. ಸ್ಥಳೀಯ ನಾಯಕತ್ವವನ್ನು ಗುರುತಿಸುವುದು, ಮತ್ತು ಜನರ ಸಮಸ್ಯೆಗಳನ್ನು ಸಂಘಟನೆಯ ಕಾರ್ಯಸೂಚಿಯೊಂದಿಗೆ ಬೆಸೆಯುವುದು ಅವರ ಪ್ರಯತ್ನಗಳ ಕೇಂದ್ರಬಿಂದುವಾಗಿತ್ತು. ರಾಜ್ಯಾಧ್ಯಕ್ಷರಾಗಿ ಜವಾಬ್ದಾರಿ ಸ್ವೀಕರಿಸಲು ಕೇಂದ್ರ ಸಚಿವ ಸ್ಥಾನವನ್ನೇ ತ್ಯಜಿಸಿದ ಅವರ ನಿರ್ಧಾರ, ಸಂಘಟನೆಯ ಕೆಲಸಕ್ಕೆ ಅವರು ನೀಡುತ್ತಿದ್ದ ಆದ್ಯತೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.


ರಾಷ್ಟ್ರಮಟ್ಟದಲ್ಲಿಯೂ ಅವರ ಸಂಘಟನಾ ಸಾಮರ್ಥ್ಯಕ್ಕೆ ಹಲವು ಜವಾಬ್ದಾರಿಗಳು ಒಲಿದುಬಂದವು. ವಿವಿಧ ರಾಜ್ಯಗಳಲ್ಲಿ ಕೆಲಸ ಮಾಡುವಾಗ ಅಲ್ಲಿನ ಸಾಮಾಜಿಕ ಪರಿಸ್ಥಿತಿ, ಸ್ಥಳೀಯ ನಾಯಕತ್ವ ಮತ್ತು ಕಾರ್ಯಕರ್ತರ ಮನೋಭಾವವನ್ನು ಅರ್ಥಮಾಡಿಕೊಳ್ಳಲು ವಿಶೇಷ ಗಮನ ನೀಡುತ್ತಿದ್ದರು. ಹಿರಿಯ ನಾಯಕರ ಅನುಭವವನ್ನು ಗೌರವಿಸುತ್ತಾ ಯುವ ಕಾರ್ಯಕರ್ತರಿಗೆ ಅವಕಾಶ ಕಲ್ಪಿಸುವ ಅವರ ಗುಣ, ಹಿರಿಯರು ಮತ್ತು ಯುವ ಕಾರ್ಯಕರ್ತರ ನಡುವೆ ಉತ್ತಮ ಸಮನ್ವಯ ಮೂಡಿಸಲು ನೆರವಾಯಿತು. ಕರ್ನಾಟಕ ಮತ್ತು ದೆಹಲಿಯ ನಡುವೆ ನಿರಂತರ ಸಂಪರ್ಕ ಸಾಧಿಸುವಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದರು.

## ಜನಪ್ರತಿನಿಧಿಯಾಗಿ: ಆರು ಬಾರಿಯ ಜನಮನ್ನಣೆ

1996ರಲ್ಲಿ ಬೆಂಗಳೂರು ದಕ್ಷಿಣದಿಂದ ಲೋಕಸಭೆಗೆ ಆಯ್ಕೆಯಾದ ಅನಂತಕುಮಾರ್, ಸತತ ಆರು ಬಾರಿ ಆ ಕ್ಷೇತ್ರವನ್ನು ಪ್ರತಿನಿಧಿಸಿದರು. ಈ ದೀರ್ಘಕಾಲದ ಜನಮನ್ನಣೆಯ ಹಿಂದೆ ನಿರಂತರ ಜನಸಂಪರ್ಕ ಮತ್ತು ಜನರಿಗೆ ಸದಾ ಲಭ್ಯವಿರುವ ಪ್ರತಿನಿಧಿಯಾಗಿರಬೇಕೆಂಬ ಅವರ ಕಾಳಜಿ ಇತ್ತು. ರಾಷ್ಟ್ರಮಟ್ಟದ ಜವಾಬ್ದಾರಿಗಳ ನಡುವೆಯೂ ಕ್ಷೇತ್ರದೊಂದಿಗಿನ ಸಂಬಂಧವನ್ನು ಉಳಿಸಿಕೊಂಡ ಅವರು, ಬೆಂಗಳೂರಿನ ಅಗತ್ಯಗಳನ್ನು ಕೇಂದ್ರದ ಗಮನಕ್ಕೆ ತರುವುದರ ಜೊತೆಗೆ ಇಡೀ ಕರ್ನಾಟಕದ ಅಭಿವೃದ್ಧಿ ವಿಚಾರಗಳಿಗೂ ಧ್ವನಿಯಾದರು.

ಪುಟ 6 ರಲ್ಲಿ ಮುಂದುವರಿದಿದೆ

# ಮೌಲ್ಯಾಧಾರಿತ ಸೇವೆಯ ಅನಂತ ಪಯಣ




ಅನಂತ ಪಥ'ದ 75ನೇ ಸಂಚಿಕೆಯನ್ನು ನಿಮ್ಮ ಕೈಗಿಡುತ್ತಿರುವ ಈ ಕ್ಷಣ ನಮಗೆ ಅತ್ಯಂತ ಸಾರ್ಥಕವೂ ವಿಶೇಷವೂ ಆಗಿದೆ. ಇಂದು ಶ್ರೀ ಅನಂತಕುಮಾರ್ ಅವರ 67ನೇ ಜನ್ಮದಿನ. ಸಾರ್ವಜನಿಕ ಬದುಕಿನ ಸೀಮಿತ ಅವಧಿಯಲ್ಲಿಯೇ ಒಬ್ಬ ವ್ಯಕ್ತಿ ತನ್ನ ದೂರದೃಷ್ಟಿ, ಕಾರ್ಯಶಕ್ತಿ ಮತ್ತು ನಾಯಕತ್ವದ ಮೂಲಕ ದೇಶಕ್ಕೂ ಸಮಾಜಕ್ಕೂ ಎಷ್ಟೊಂದು ಕೊಡುಗೆ ನೀಡಬಹುದು ಎಂಬುದಕ್ಕೆ ಅವರ ಬದುಕೇ ಜೀವಂತ ನಿದರ್ಶನ. ತಾವು ಸಾಧನೆಯ ಹಾದಿಯಲ್ಲಿ ಸಾಗುವುದರ ಜೊತೆಗೆ ಅಸಂಖ್ಯಾತ ಜನರನ್ನು ಪ್ರೇರೇಪಿಸಿ, ಅವರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸಿ, ಲಕ್ಷಾಂತರ ಜನರನ್ನು ದೇಶಸೇವೆ ಮತ್ತು ಸಮಾಜಸೇವೆಯಲ್ಲಿ ತೊಡಗಿಸಿದವರು ಅವರು. ತಾವು ನಂಬಿದ ಮೌಲ್ಯಗಳನ್ನು ಮಾತಿನಲ್ಲಿ ಮಾತ್ರ ಪ್ರತಿಪಾದಿಸದೆ, ಬದುಕು ಮತ್ತು ಕಾರ್ಯಗಳ ಮೂಲಕ ಸಾಕಾರಗೊಳಿಸಿದರು. ಅವರ ಸಾಧನೆಯ ವೈಶಿಷ್ಟ್ಯ ಕೇವಲ ಅವರು ನಿರ್ವಹಿಸಿದ ಹುದ್ದೆಗಳಲ್ಲಿ ಇರಲಿಲ್ಲ; ತಮ್ಮೊಂದಿಗೆ ಅನೇಕ ಕಾರ್ಯಕರ್ತರನ್ನು ಬೆಳೆಸಿ, ಸಮಾಜಮುಖಿ ಕಾರ್ಯಗಳಿಗೆ ನಿರಂತರ ಚೈತನ್ಯ ನೀಡಿದುದರಲ್ಲಿಯೂ ಇತ್ತು.

ಅವರ ಬದುಕಿನ ಕೇಂದ್ರದಲ್ಲಿದ್ದದ್ದು ಭಾರತೀಯ ಮೌಲ್ಯಗಳ ಮೇಲಿನ ಅಚಲ ನಂಬಿಕೆ. ಜನಕ ಮಹಾರಾಜರಿಂದ ಮೈಸೂರಿನ ಮಹಾರಾಜರವರೆಗೆ, ಅಧಿಕಾರವನ್ನು ಜನಕಲ್ಯಾಣ ಮತ್ತು ಭಾರತೀಯ ಮೌಲ್ಯಗಳ ರಕ್ಷಣೆಗೆ ಬಳಸಿದ ಶ್ರೇಷ್ಠ ಆಡಳಿತಗಾರರ ಭವ್ಯ ಪರಂಪರೆ ನಮ್ಮ ದೇಶಕ್ಕಿದೆ. ಈ ಪರಂಪರೆಯನ್ನು ಹೊಸ ಪೀಳಿಗೆಗೆ ಪರಿಚಯಿಸುವ ಸಂಕಲ್ಪದಿಂದ ಅನಂತಕುಮಾರ್ ಪ್ರತಿಷ್ಠಾನವು ಸಮಗ್ರ ಅಧ್ಯಯನ ನಡೆಸಿ 31 ಮಂದಿ ಆದರ್ಶ ಆಡಳಿತಗಾರರನ್ನು ಗುರುತಿಸಿದೆ. ಅವರ ಜೀವನದೃಷ್ಟಿ, ಆಡಳಿತ ವೈಶಿಷ್ಟ್ಯ ಮತ್ತು ರಾಷ್ಟ್ರಕ್ಕೆ ನೀಡಿದ ಕೊಡುಗೆಗಳನ್ನು ಬಿಂಬಿಸುವ ಪ್ರದರ್ಶನವನ್ನು ಅನಂತಕುಮಾರ್ ಅವರ 67ನೇ ಜನ್ಮದಿನಾಚರಣೆಯ ಪೂರ್ವಭಾವಿಯಾಗಿ ಸೆಪ್ಟೆಂಬರ್ 21ರಂದು ಉದ್ಘಾಟಿಸಲಾಯಿತು. ಈ ಪ್ರದರ್ಶನವು ಅವರ ರಾಷ್ಟ್ರನಿಷ್ಠ ಚಿಂತನೆಗೆ ಸಲ್ಲಿಸುವ ಅರ್ಥಪೂರ್ಣ ಗೌರವವೂ ಆಗಿದೆ.

ಕಾಲಘಟ್ಟಗಳು, ಪ್ರದೇಶಗಳು ಮತ್ತು ಸವಾಲುಗಳು ಬೇರೆಯಾಗಿದ್ದರೂ ಈ ಆಡಳಿತಗಾರರಲ್ಲಿ ಕೆಲವು ಸಮಾನ ಮೌಲ್ಯಗಳು ಎದ್ದು ಕಾಣುತ್ತವೆ. ಅವರ ಜೀವನ ಮತ್ತು ಆಡಳಿತ ಧರ್ಮದ ತಳಹದಿಯ ಮೇಲೆ ರೂಪುಗೊಂಡಿದ್ದವು. ಧರ್ಮವು ಅವರಿಗೆ ಕೇವಲ ವೈಯಕ್ತಿಕ ನಂಬಿಕೆಯಾಗಿರದೆ, ನ್ಯಾಯ, ಕರ್ತವ್ಯ ಮತ್ತು ಜನಕಲ್ಯಾಣಕ್ಕೆ ದಿಕ್ಕು ತೋರಿಸುವ ಆಡಳಿತತತ್ತ್ವವಾಗಿತ್ತು. ಸೇವೆಗೆ ಆದ್ಯತೆ, ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಮತ್ತು ಹಿರಿಯರ ಅನುಭವಕ್ಕೆ ಗೌರವ ಅವರ ನಾಯಕತ್ವದ ಮೂಲಗುಣಗಳಾಗಿದ್ದವು. ವಿವಿಧ ಶತಮಾನಗಳ ಈ ನಾಯಕರನ್ನು ಒಂದೇ ಮೌಲ್ಯಪರಂಪರೆಯಲ್ಲಿ ಬೆಸೆಯುವ ಸಾಮಾನ್ಯ ಸೂತ್ರವೂ ಇದೇ. ಈ ಪ್ರದರ್ಶನವು ಇಂದಿನ ಆಡಳಿತಗಾರರು ಮತ್ತು ಜನಪ್ರತಿನಿಧಿಗಳಿಗೆ ಮಾರ್ಗದರ್ಶಕವಾಗುವುದರ ಜೊತೆಗೆ, ಮಕ್ಕಳಿಗೆ ಭಾರತೀಯ ಆಡಳಿತ ಪರಂಪರೆಯನ್ನು ಪರಿಚಯಿಸುವ ಜೀವಂತ ಪಾಠಶಾಲೆಯಾಗಿದೆ.



## ಸಂಪಾದಕೀಯ

ತೇಜಸ್ವಿನಿ ಅನಂತಕುಮಾರ್

ಮೌಲ್ಯಾಧಾರಿತ ಆಡಳಿತದ ಜೊತೆಗೆ ಪರಿಸರಪ್ರಜ್ಞೆಯ ಜೀವನಶೈಲಿಯೂ ಸುಸ್ಥಿರ ಭವಿಷ್ಯಕ್ಕೆ ಅಗತ್ಯ. ಈ ದೃಷ್ಟಿಯಿಂದ ಅದಮ್ಯ ಚೇತನವು 'ಹಸಿರು ಜೀವನಶೈಲಿ'ಯ ವಿಶೇಷ ಪ್ರದರ್ಶನವನ್ನು ರೂಪಿಸಿದೆ. ಒಂದು ವಸ್ತು ಹೇಗೆ ತಯಾರಾಯಿತು, ಅದರ ಬಳಕೆಯಿಂದ ಪರಿಸರದ ಮೇಲೆ ಏನು ಪರಿಣಾಮವಾಗುತ್ತದೆ ಹಾಗೂ ಬಳಕೆಯ ನಂತರ ಅದು ತ್ಯಾಜ್ಯವಾಗುತ್ತದೆಯೇ ಅಥವಾ ಮರುಬಳಕೆಗೆ ಬರುತ್ತದೆಯೇ ಎಂಬ ಸಂಪೂರ್ಣ ಪ್ರಕ್ರಿಯೆಯನ್ನು ಅರಿಯುವುದೇ 'ಚಕ್ರೀಯ ಆರ್ಥಿಕತೆ'ಯ ಮೂಲ ಆಶಯ. ವಸ್ತುವನ್ನು ಖರೀದಿಸುವ ಮುನ್ನ ಅದರ ಅಗತ್ಯವನ್ನು ಯೋಚಿಸುವುದು, ಬಳಕೆಯ ಅವಧಿಯನ್ನು ಹೆಚ್ಚಿಸುವುದು ಮತ್ತು ಸಾಧ್ಯವಾದಷ್ಟು ಮರುಬಳಕೆ ಮಾಡುವುದು ಈ ಚಿಂತನೆಯ ಪ್ರಾಯೋಗಿಕ ಭಾಗಗಳಾಗಿವೆ.

ನಾವು ಬಳಸುವ ಪ್ರತಿಯೊಂದು ವಸ್ತುವಿನ ಹಿಂದೆಯೂ ಪರಿಸರದ ಬೆಲೆಯಿದೆ. ಒಂದು ಕೆಜಿ ಸಿಮೆಂಟ್ ಉತ್ಪಾದನೆಯಿಂದ ಸುಮಾರು 500 ಗ್ರಾಂ ಕಾರ್ಬನ್ ಡೈಆಕ್ಸೈಡ್ ಬಿಡುಗಡೆಯಾದರೆ, ಒಂದು ಕೆಜಿ ಉಕ್ಕಿನ ತಯಾರಿಕೆಯಿಂದ ಸುಮಾರು ಎರಡೂವರೆ ಕೆಜಿಯಷ್ಟು ಕಾರ್ಬನ್ ಡೈಆಕ್ಸೈಡ್ ಹಾಗೂ ಇತರ ಮಾಲಿನ್ಯಕಾರಕ ಅನಿಲಗಳು ವಾತಾವರಣವನ್ನು ಸೇರುತ್ತವೆ. ಈ ಅಂಕಿ-ಅಂಶಗಳು ನಿತ್ಯಜೀವನದ ಪ್ರತಿಯೊಂದು ಆಯ್ಕೆಯೂ ಪರಿಸರದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ನೆನಪಿಸುತ್ತವೆ. ಗಿಡಗಳು ಕಾರ್ಬನ್ ಡೈಆಕ್ಸೈಡ್ ಹೀರಿಕೊಂಡು ಆಮ್ಲಜನಕ ನೀಡುವುದರಿಂದ ಗಿಡ ನೆಡುವುದು ಅಗತ್ಯ. ಆದರೆ ಗಿಡ ನೆಡುವುದೊಂದೇ ಸಾಕಾಗುವುದಿಲ್ಲ; ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಿ, ಸಂಪನ್ಮೂಲಗಳನ್ನು ಜವಾಬ್ದಾರಿಯಿಂದ ಬಳಸಬೇಕು.

2070ರ ವೇಳೆಗೆ ಇಂಗಾಲದ ಹೊರಸೂಸುವಿಕೆಯನ್ನು ನಿವ್ವಳ ಶೂನ್ಯ ಮಟ್ಟಕ್ಕೆ ತರುವುದು ಕೇವಲ ಸರ್ಕಾರದ ಗುರಿಯಲ್ಲ; ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯೂ ಹೌದು. ಪ್ರತಿಯೊಬ್ಬರೂ ತಮ್ಮ ಪಾಲಿನ 'ಅಳಿಲು ಸೇವೆ' ಸಲ್ಲಿಸಿದಾಗ ಮಾತ್ರ ಸಾಮೂಹಿಕ ಬದಲಾವಣೆ ಸಾಧ್ಯ. ಇದಕ್ಕಾಗಿ ಸರಿಯಾದ ಮಾಹಿತಿ ಪಡೆಯುವುದು, ಅದನ್ನು ಅರ್ಥಮಾಡಿಕೊಳ್ಳುವುದು ಮತ್ತು ನಮ್ಮ ಬದುಕಿನಲ್ಲಿ ಕಾರ್ಯರೂಪಕ್ಕೆ ತರುವುದು ಅಗತ್ಯ. ನಮ್ಮ ಕೊಡುಗೆ ಸಣ್ಣದೆನಿಸಿದರೂ, ಅದು ಸಾಮೂಹಿಕ ಪ್ರಯತ್ನದೊಂದಿಗೆ ಸೇರಿದಾಗ ದೊಡ್ಡ ಪರಿಣಾಮವನ್ನು ಉಂಟುಮಾಡುತ್ತದೆ.

ಪರಿಸರ ಸಂರಕ್ಷಣೆ ದೊಡ್ಡ ಘೋಷಣೆಗಳಿಂದ ಆರಂಭವಾಗುವುದಿಲ್ಲ; ನಮ್ಮ ದಿನನಿತ್ಯದ ಸಣ್ಣ ನಿರ್ಧಾರಗಳಿಂದ ಆರಂಭವಾಗುತ್ತದೆ. ಹಾಲಿನ ಪ್ಯಾಕೆಟ್ ತೆರೆಯುವಾಗ ಅದರ ಮೂಲೆಯ ಸಣ್ಣ ತುಂಡು ಬೇರ್ಪಡದಂತೆ ನೋಡಿಕೊಳ್ಳುವುದು, ಹೊರಗೆ ಹೋಗುವಾಗ ಕೈವಸ್ತ್ರ ಮತ್ತು ಮರುಬಳಕೆಯ ನೀರಿನ ಬಾಟಲಿ ಕೊಂಡೊಯ್ಯುವುದು, ಕಾಗದದ ನ್ಯಾಪ್ಕಿನ್ ಹಾಗೂ ಏಕಬಳಕೆಯ ವಸ್ತುಗಳನ್ನು ಸಾಧ್ಯವಾದಷ್ಟು ತಪ್ಪಿಸುವುದು ಸಣ್ಣದಾದರೂ ಪರಿಣಾಮಕಾರಿ ಹೆಜ್ಜೆಗಳು. ಲಕ್ಷಾಂತರ ಜನರು ಇಂತಹ ನಿರ್ಧಾರ ಕೈಗೊಂಡಾಗ ದೊಡ್ಡ ಪರಿಸರ ಬದಲಾವಣೆ ಸಾಧ್ಯವಾಗುತ್ತದೆ.

ಪರಿಸರದ ಕುರಿತು ಜವಾಬ್ದಾರಿಯುತ ಸಮಾಜವನ್ನು ನಿರ್ಮಿಸುವುದರ ಜೊತೆಗೆ, ಮುಂದಿನ ಪೀಳಿಗೆಯ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದೂ ನಮ್ಮ ಕರ್ತವ್ಯ. ಅದಮ್ಯ ಚೇತನದ ಮಧ್ಯಾಹ್ನದ ಬಿಸಿಯೂಟ ಯೋಜನೆಯ ಪ್ರಯೋಜನ ಪಡೆಯುತ್ತಿರುವ ಶಾಲೆಗಳಲ್ಲಿ ಓದಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರದ ಮೂಲಕ ಗೌರವಿಸುತ್ತಿದ್ದೇವೆ. ಅವರ ಪರಿಶ್ರಮವನ್ನು ಗುರುತಿಸುವುದು ಇನ್ನಷ್ಟು ವಿದ್ಯಾರ್ಥಿಗಳಲ್ಲಿ ಸಾಧನೆಯ ಉತ್ಸಾಹವನ್ನು ಮೂಡಿಸುತ್ತದೆ. ಅನಂತಕುಮಾರ್ ಅವರ ಪ್ರೇರಣೆಯಿಂದ 2004ರಲ್ಲಿ ಆರಂಭವಾದ ಈ ಅರ್ಥಪೂರ್ಣ ಪರಂಪರೆ ಇಂದಿಗೂ ಮುಂದುವರಿಯುತ್ತಿದೆ.

ಅನಂತಕುಮಾರ್ ಅವರು ಇಂದು ನಮ್ಮ ನಡುವೆ ದೈಹಿಕವಾಗಿ ಇಲ್ಲದಿದ್ದರೂ, ಅವರ ಚಿಂತನೆ ಮತ್ತು ಸೇವೆಯ ಪ್ರೇರಣೆ ನಮ್ಮ ಪ್ರತಿಯೊಂದು ಪ್ರಯತ್ನದಲ್ಲೂ ಜೀವಂತವಾಗಿದೆ. ಸಮಾಜವನ್ನು ಒಗ್ಗೂಡಿಸುತ್ತಾ, ಪರಿಸರವನ್ನು ಸಂರಕ್ಷಿಸುತ್ತಾ ಮತ್ತು ಹೊಸ ಪೀಳಿಗೆಯನ್ನು ಪ್ರೋತ್ಸಾಹಿಸುತ್ತಾ ಸಾಗುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ. 'ಅನಂತ ಪಥ'ದ 75ನೇ ಸಂಚಿಕೆ ಈ ಪಯಣದ ಮಹತ್ವದ ಮೈಲುಗಲ್ಲು. ಅವರ ಕನಸುಗಳನ್ನು ಕಾರ್ಯರೂಪಕ್ಕೆ ತರುವ ದಾರಿಯಲ್ಲಿ ನಾವೆಲ್ಲರೂ ಒಟ್ಟಾಗಿ ಮುನ್ನಡೆಯೋಣ.

# ಭಗವದ್ಗೀತೆಯ ನಿಜಾರ್ಥದಲ್ಲಿ ಜೀವಿಸಿದ ಅನಂತ್'

**- ಶ್ರೀಮತಿ ಸುಷ್ಮಾ ಸ್ವರಾಜ್**

ಸಂಸತ್ತಿನ ಹಿಂದಿನ ಅಧಿವೇಶನದಲ್ಲಿ ನಾವು ಸೇರಿದ್ದಾಗ, ಮುಂದಿನ ಅಧಿವೇಶನದ ವೇಳೆಗೆ ಅನಂತಕುಮಾರ್‌ಜೀ ನಮ್ಮ ನಡುವೆ ಇರುವುದಿಲ್ಲವೆಂದೂ, ಅವರಿಗೆ ಹೀಗೆ ಶ್ರದ್ಧಾಂಜಲಿ ಸಮರ್ಪಿಸಬೇಕಾಗುತ್ತದೆಂದೂ ನಮ್ಮಲ್ಲಿ ಯಾರೊಬ್ಬರೂ ಯೋಚಿಸಿರಲಿಲ್ಲ. ಆದರೆ ಅಂಥದೊಂದು ಕಠೋರ ವಾಸ್ತವ ಎದುರಾಗಿರುವುದನ್ನು ನಂಬಲೇ ಆಗುತ್ತಿಲ್ಲ. ನನ್ನ ಹಾಗೂ ಅನಂತಕುಮಾರ್ ನಡುವಿನ ಬಾಂಧವ್ಯ ತೀರಾ ವಿಭಿನ್ನವಾಗಿತ್ತು. ವಯಸ್ಸಿನಲ್ಲಿ ಅವರು ನನಗಿಂತ ಕೇವಲ ಏಳು ವರ್ಷ ಚಿಕ್ಕವರಾಗಿದ್ದರೂ, ನನ್ನನ್ನು 'ಅಮ್ಮಾ' ಎಂದೇ ಕರೆಯುತ್ತಿದ್ದರು. ಹೀಗೆ ಸಂಬೋಧಿಸಲು ಅನುಮತಿ ನೀಡುವಂತೆಯೂ ಅವರು ನನ್ನನ್ನು ಕೋರಿದ್ದರು.

ಒಂದು ದಿನ ಅವರು, "ನನ್ನ ತಾಯಿಯೂ ಬಹುತೇಕ ನಿಮ್ಮಷ್ಟೇ ಎತ್ತರವಾಗಿದ್ದರು. ಅವರೂ ಕೃಷ್ಣನ ಉಪಾಸಕಿಯಾಗಿದ್ದರು. ಪ್ರತಿದಿನ ಭಗವದ್ಗೀತೆಯನ್ನು ಪಠಿಸುತ್ತಿದ್ದರು ಹಾಗೂ ದಿನವೂ ಗೀತೆಯ ಹತ್ತು ಶ್ಲೋಕಗಳನ್ನು ಓದುವಂತೆ ನನ್ನಿಂದ ಸಂಕಲ್ಪ ಮಾಡಿಸಿದ್ದರು. ಬಹುಶಃ ಈ ಕಾರಣದಿಂದಲೇ ನನಗೆ ನಿಮ್ಮಲ್ಲಿ ನನ್ನ ತಾಯಿಯ ಛಾಯೆ ಕಾಣುತ್ತಿದೆಯೇನೋ. ನಾನು ನಿಮ್ಮನ್ನು 'ಅಮ್ಮಾ' ಎಂದು ಕರೆಯಬಹುದೇ?" ಎಂದು ಕೇಳಿದರು. ಅದಕ್ಕೆ ನಾನು, "ಅನಂತ್, ನನ್ನಲ್ಲಿ ನಿಮ್ಮ ತಾಯಿಯ ಛಾಯೆ ಕಾಣುತ್ತಿದೆ ಎಂದ ಮೇಲೆ ಅನುಮತಿಯ ಅಗತ್ಯವೇನಿದೆ?" ಎಂದೆ.

ಈ ಘಟನೆಯ ನಂತರ, ಅವರು ದುಃಖಿತರಾದಾಗ ಅಥವಾ ಚಿಂತಿತರಾದಾಗ ಕರೆ ಮಾಡಿ, "ಅಮ್ಮಾ, ನಿಮ್ಮಲ್ಲಿಗೆ ಬರುತ್ತಿದ್ದೇನೆ" ಎನ್ನುತ್ತಿದ್ದರು. "ಬರಬಹುದೇ? ನಿಮಗೆ ಸಮಯವಿದೆಯೇ?" ಎಂದು ಎಂದಿಗೂ ಕೇಳುತ್ತಿರಲಿಲ್ಲ. "ಏನಾದರೂ ವಿಶೇಷವಾಗಿ ಮಾತನಾಡುವುದಿದೆಯೇ?" ಎಂದು ನಾನು ಕೇಳಿದರೆ, "ಏನಿಲ್ಲ ಅಮ್ಮಾ; ನಿಮ್ಮೊಂದಿಗೆ ಚಹಾ ಕುಡಿಯುತ್ತೇನೆ, ಒಂದಷ್ಟು ಹರಟುತ್ತೇನೆ, ನಿಮ್ಮ ಆಶೀರ್ವಾದ ಪಡೆದು ಮರಳುತ್ತೇನೆ" ಎನ್ನುತ್ತಿದ್ದರು. ನಮ್ಮ ನಡುವಿನ ಆತ್ಮೀಯ ಮಾತುಕತೆ ಹೀಗೆಯೇ ಮುಂದುವರಿಯುತ್ತಿತ್ತು.

ಅನಂತ್‌ಕುಮಾರ್ ಅವರನ್ನು ಬಲ್ಲವರೆಲ್ಲರೂ ಅವರು ಕುಶಲ ಸಂಘಟಕ, ನಿಪುಣ ಆಡಳಿತಗಾರ, ಸದಾ ಹಸನ್ಮುಖಿ ಮತ್ತು ಒಳ್ಳೆಯ ಮಿತ್ರರಾಗಿದ್ದರು ಎನ್ನುತ್ತಾರೆ. ಆದರೆ ಅವರ ಬದುಕಿನ ಮತ್ತೊಂದು ಮಗ್ಗುಲು ಅತ್ಯಂತ ಅಪೂರ್ವವಾದುದು. ಅದು ಅವರ ಆಧ್ಯಾತ್ಮಿಕ ಸ್ಥೈರ್ಯ, ಕರ್ತವ್ಯನಿಷ್ಠೆ ಮತ್ತು ಮೃತ್ಯುವನ್ನು ಎದುರಿಸಿದ ಅಸಾಧಾರಣ ಧೈರ್ಯದ ಪರಿಚಯ ಮಾಡಿಕೊಡುವಂಥದ್ದಾಗಿತ್ತು.

ಅನಾರೋಗ್ಯದ ಚಿಕಿತ್ಸೆಗಾಗಿ ಅವರು ಅಮೆರಿಕದಲ್ಲಿದ್ದಾಗ, ತೇಜಸ್ವಿನಿಯವರು ಮತ್ತು ಅವರ ಮಗಳೊಂದಿಗೆ ನನ್ನ ಮಾತುಕತೆ ನಡೆಯಿತು. ಅನಂತ್ ಅವರೊಂದಿಗೆ ಮಾತನಾಡಲು ಅವಕಾಶ ಮಾಡಿಕೊಡುವಂತೆ ಕೇಳಿದೆ. ಆಗ ಅವರು, "ನಿಮ್ಮೊಂದಿಗೆ ಇಂದು ಮಾತನಾಡಲು ಸಾಧ್ಯವಾಗುತ್ತಿರುವುದಕ್ಕೆ ತುಂಬಾ ಸಂತೋಷವಾಗಿದೆ. ಆದಷ್ಟು ಬೇಗ ಭಾರತಕ್ಕೆ ಮರಳಲಿದ್ದೇನೆ" ಎಂದರು.

ಭಾರತಕ್ಕೆ ಮರಳಿದ ಮರುದಿನ ಅವರು ಮಾತನಾಡಿದಾಗ, "ನೀವು ನಿನ್ನೆಯೇ ವಾಪಸ್ ಬಂದಿರಲ್ಲವೇ? ನಿನ್ನೆಯೇ ಏಕೆ ಕರೆ ಮಾಡಲಿಲ್ಲ?" ಎಂದು ಪ್ರೀತಿಯಿಂದ ದೂರಿಕೊಂಡೆ. ಅದಕ್ಕೆ ಅವರು, "ಇಪ್ಪತ್ನಾಲ್ಕು ಗಂಟೆಗಳ ಕಾಲ ವಿಮಾನದಲ್ಲಿದ್ದೆ. ದೀರ್ಘ ಪ್ರಯಾಣದಿಂದ ನಿನ್ನೆ ತುಂಬಾ ಸುಸ್ತಾಗಿತ್ತು. ಈಗಷ್ಟೇ ಸ್ನಾನ ಮಾಡಿ, ಉಪ್ಪಿಟ್ಟು ತಿಂದು ನಿಮ್ಮೊಂದಿಗೆ ಮಾತನಾಡುತ್ತಿದ್ದೇನೆ" ಎಂದರು. "ಆಯಿತು, ವಿಶ್ರಾಂತಿ ತೆಗೆದುಕೊಳ್ಳಿ" ಎಂದಾಗ, "ಹೌದು, ಇನ್ನು ನಾನು ಮಲಗಿಬಿಡುತ್ತೇನೆ" ಎಂದರು.

ಅವರ ನಿಧನದ ಬಳಿಕ ತೇಜಸ್ವಿನಿಯವರು ಮತ್ತು ಅವರ ಮಗಳು ನನ್ನನ್ನು ಭೇಟಿಯಾದರು. ಅನಂತ್ ನನ್ನೊಂದಿಗೆ ನಡೆಸಿದ್ದ ಆ ಮಾತುಕತೆಯನ್ನು ಅವರಿಗೆ ತಿಳಿಸಿದೆ. "ಕಾಯಿಲೆಯ ಬಗ್ಗೆ ಮೊದಲೇ ತಿಳಿದಿದ್ದರೆ, ಉತ್ತಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಬಹುದಿತ್ತಲ್ಲವೇ?" ಎಂದು ಕೊಂಚ ಆಕ್ಷೇಪದ ಧ್ವನಿಯಲ್ಲಿ ಕೇಳಿದೆ. ಆಗ ತೇಜಸ್ವಿನಿಯವರು ನೀಡಿದ ವಿವರಣೆ ನನ್ನನ್ನು ಆಘಾತಗೊಳಿಸಿತು.



ಕರ್ನಾಟಕದ ಉಪಚುನಾವಣೆಯ ಪ್ರಚಾರಕ್ಕೆ ತೆರಳಿದ್ದಾಗ ಅನಂತ್ ಅವರಿಗೆ ಕೆಮ್ಮು ಆರಂಭವಾಗಿತ್ತು. ಬೆಂಗಳೂರಿಗೆ ಮರಳಿದಾಗ ಕೆಮ್ಮು ಹೆಚ್ಚಾದ ಕಾರಣ ವೈದ್ಯರನ್ನು ಭೇಟಿಯಾದರು. ಎಕ್ಸ್-ರೇ ಮತ್ತು ಇತರ ಪರೀಕ್ಷೆಗಳ ವರದಿ ಪರಿಶೀಲಿಸಿದ ವೈದ್ಯರು, ಅವರಿಗೆ ಶ್ವಾಸಕೋಶದ ಕ್ಯಾನ್ಸರ್ ಇದ್ದು, ಅದು ನಾಲ್ಕನೇ ಹಂತದಲ್ಲಿರುವುದರಿಂದ ಗುಣಪಡಿಸುವುದು ಸಾಧ್ಯವಿಲ್ಲ ಎಂದರು. "ನನಗಿನ್ನೂ ಎಷ್ಟು ಸಮಯವಿದೆ?" ಎಂದು ಅನಂತ್ ಕೇಳಿದರು. ಅದಕ್ಕೆ ವೈದ್ಯರು, "ಚಿಕಿತ್ಸೆಗೆ ಒಂದರಿಂದ ಮೂರು ತಿಂಗಳ ಕಾಲ ಬೇಕಾಗುತ್ತದೆ. ಉಸಿರು ಈಶ್ವರನ ಕೈಯಲ್ಲಿದೆ; ಆತ ಒಂದು ವರ್ಷವೋ, ಎರಡು ವರ್ಷವೋ ಉಳಿಸಬಹುದು" ಎಂದರು.

ಮನೆಗೆ ಮರಳಿದ ಕೂಡಲೇ ಅನಂತ್, "ತೇಜಸ್ವಿನಿ, ನಾನು ಪ್ರಚಾರಕ್ಕೆ ತೆರಳುತ್ತಿದ್ದೇನೆ" ಎಂದರು. "ಮತ್ತೆ ಪ್ರಚಾರಕ್ಕೆ ಹೋಗುತ್ತೀರಾ?" ಎಂದು ಅವರು ಆತಂಕದಿಂದ ಕೇಳಿದಾಗ, "ಚಿಕಿತ್ಸೆಗೆ ಒಂದರಿಂದ ಮೂರು ತಿಂಗಳ ಕಾಲಾವಕಾಶವಿದೆಯಲ್ಲ; ಪ್ರಚಾರಕ್ಕೆ ಹೋಗಿಬರುತ್ತೇನೆ" ಎಂದು ಹೇಳಿ ತೆರಳಿಯೇಬಿಟ್ಟರು.

ನಂತರ ಅಮೆರಿಕದಲ್ಲಿ ವೈದ್ಯಕೀಯ ಶಿಕ್ಷಣ ಪಡೆದಿದ್ದ ಮತ್ತೊಬ್ಬ ವೈದ್ಯರ ಸಲಹೆ ಪಡೆಯಲು ಹೋದರು. ಅವರ ಬಳಿ ಅನಂತ್, "ನನಗೆ ಎಷ್ಟು ಸಮಯವಿದೆ ಎಂಬುದು ತಿಳಿದಿದೆ. ಆದರೆ ನಾನು ಯಾವ ರೀತಿಯಲ್ಲಿ ಸಾಯುತ್ತೇನೆ ಎಂಬುದನ್ನು ತಿಳಿಸಿಬಿಡಿ" ಎಂದರು. ಅದಕ್ಕೆ ವೈದ್ಯರು, "ಏನೂ ಆಗುವುದಿಲ್ಲ. ನೋವು ತಡೆಯಲು ಉಪಶಮನಕಾರಿ ಔಷಧ ನೀಡುತ್ತೇವೆ. ನೀವು ಹಾಗೆಯೇ ನಿದ್ರೆಗೆ ಜಾರಿಬಿಡುತ್ತೀರಿ" ಎಂದರು. ಅದನ್ನು ಕೇಳಿದ ಅನಂತ್, "ಆಯಿತು, ನಾನು ಮಲಗಿರುವಾಗಲೇ ಹೋಗಿಬಿಡುತ್ತೇನೆ" ಎಂದರು.


ತೇಜಸ್ವಿನಿಯವರ ಈ ಮಾತು ಕೇಳಿದಾಗ, ದೂರವಾಣಿಯಲ್ಲಿ ಅನಂತ್ ಹೇಳಿದ್ದ "ಇನ್ನು ನಾನು ಮಲಗಿಬಿಡುತ್ತೇನೆ" ಎಂಬ ಮಾತು ನೆನಪಾಯಿತು. ಅದನ್ನು ಈ ಘಟನೆಯೊಂದಿಗೆ ಸಂಬಂಧಿಸಿ ನೋಡಿದಾಗ, ಅವರು ತಮ್ಮ ಮನಸ್ಸನ್ನು ಆಗಲೇ ಕೃಷ್ಣನೊಂದಿಗೆ ಬೆಸೆದುಕೊಂಡಿದ್ದರು ಎಂದು ನನಗನಿಸಿತು. ತರುವಾಯ ಮನೆಯವರಾಗಲಿ, ಹೊರಗಿನವರಾಗಲಿ ಯಾರೊಂದಿಗೂ ಅವರು ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಯಾರಾದರೂ ಭೇಟಿಯಾಗಲು ಬಂದರೆ, "'ನಾನು ಮಲಗಿದ್ದೇನೆ' ಎಂದು ಹೇಳಿ ಕಳುಹಿಸಿಬಿಡು" ಎನ್ನುತ್ತಿದ್ದರಂತೆ.

ಯಾರಾದರೂ ಅಗಲಿದಾಗ, "ದೇವರೇ, ಅವರಿಗೆ ನಿನ್ನ ಚರಣಕಮಲದಲ್ಲಿ ಸ್ಥಾನ ನೀಡು" ಎಂದು ಹೇಳುವುದು ವಾಡಿಕೆ. ಆದರೆ ಅನಂತ್ ಅವರ ವಿಷಯದಲ್ಲಿ ಹಾಗಲ್ಲ. "ನಾನು ನಿದ್ರೆಗೆ ಜಾರುತ್ತೇನೆ" ಎಂದು ಹೇಳಿದಾಗಲೇ ಅವರು ಭಗವಾನ್ ಕೃಷ್ಣನನ್ನು ತಲುಪಿದ್ದರು.

"ಈ ಪ್ರಪಂಚಕ್ಕೆ ನೀನು ಬಂದಾಗ ಪ್ರಪಂಚ ನಗುತ್ತಿತ್ತು; ನೀನು ಅಳುತ್ತಿದ್ದೆ. ನೀನು ತೆರಳುವಾಗ ನೀನು ನಗುತ್ತಿರಬೇಕು ಹಾಗೂ ನಿನ್ನ ಕಾರ್ಯಗಳನ್ನು ಸ್ಮರಿಸಿಕೊಂಡು ಪ್ರಪಂಚ ಅಳುತ್ತಿರಬೇಕು" ಎಂಬ ಮಾತಿದೆ. ಅನಂತ್ ಕುಮಾರ್ ಅಂಥ ಕಾರ್ಯಗಳನ್ನು ನೆರವೇರಿಸಿ ನಮ್ಮಿಂದ ದೂರವಾಗಿದ್ದಾರೆ. ಕುಟುಂಬದವರು ಅಳುತ್ತಿರುವಾಗ, ತಾವು ನಗುನಗುತ್ತಲೇ ತೆರಳಿದ್ದಾರೆ. ನನ್ನನ್ನು 'ಅಮ್ಮಾ' ಎಂದು ಕರೆದ ಆ ಮಗನು ಭಗವದ್ಗೀತೆಯ ನಿಜಾರ್ಥವನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡು, ಮೃತ್ಯುವನ್ನೂ ಧೈರ್ಯದಿಂದ ಎದುರಿಸಿದ್ದ. ಅಂಥ ಮಗನಿಗೆ ವಿನಮ್ರಪೂರ್ವಕವಾಗಿ ಶ್ರದ್ಧಾಂಜಲಿ ಅರ್ಪಿಸುತ್ತೇನೆ.










ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಬೀದರ
ಯುವ ಪ್ರತಿಭೆ 1987
ಸ್ವಾಮಿ ವಿವೇಕಾನಂದರ ಜಯಂತ್ಯೋತ್ಸವ
ABVP
ದಿನಾಂಕ: 12-1-1987





# ಅನಂತ
















2018


भारतीय जनता पार्टी
BHARATIYA JANATA PARTY
सुशासन
संकल्प





2003 11 12


245 Lakh MT
(Highest Ever)
2015-16
UREA

# ಪಯಣ


B.J.P









PRADHAN MANTRI
MISSION - 3000 Kendra
18th January, 2017
constitution
club of india





ಪುಟ 1 ರಿಂದ

# ಅನಂತಕುಮಾರ್: ಸೇವೆಯ ಪಥದಲ್ಲಿ ಅರಳಿದ ಬದುಕು



### ಆಡಳಿತದಲ್ಲಿ ಜನಪರ ಸ್ಪರ್ಶ

ಅಟಲ್ ಬಿಹಾರಿ ವಾಜಪೇಯಿ ಮತ್ತು ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರಗಳಲ್ಲಿ ಪ್ರಮುಖ ಸಚಿವರಾಗಿ ಸೇವೆ ಸಲ್ಲಿಸಿದ ಅನಂತಕುಮಾರ್, ತಮಗೆ ವಹಿಸಲಾದ ಪ್ರತಿಯೊಂದು ಖಾತೆಯನ್ನೂ ಜನರ ಬದುಕಿನ ಅಗತ್ಯಗಳೊಂದಿಗೆ ಜೋಡಿಸಲು ಪ್ರಯತ್ನಿಸಿದರು. ನಾಗರಿಕ ವಿಮಾನಯಾನ, ಪ್ರವಾಸೋದ್ಯಮ, ಸಂಸ್ಕೃತಿ, ನಗರಾಭಿವೃದ್ಧಿ, ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳಂತಹ ವಿಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ವಿಶಾಲ ಅನುಭವ ಅವರಿಗಿತ್ತು. ನಾಗರಿಕ ವಿಮಾನಯಾನ ಸಚಿವರಾಗಿ ವಿಮಾನ ನಿಲ್ದಾಣಗಳ ಅಭಿವೃದ್ಧಿ ಮತ್ತು ಉತ್ತಮ ಸಂಪರ್ಕಕ್ಕೆ ಅವರು ಮಹತ್ವ ನೀಡಿದರು. ಮುಕ್ತ ಆಗಸ ನೀತಿಗೆ ಉತ್ತೇಜನ ನೀಡುವ ಮೂಲಕ ವಿಮಾನಯಾನ ಕ್ಷೇತ್ರದ ವಿಸ್ತರಣೆಗೆ ದಾರಿ ಮಾಡಿಕೊಟ್ಟು, ಜನಸಾಮಾನ್ಯರಿಗೂ ವಿಮಾನಯಾನದ ಅವಕಾಶ ದೊರೆಯುವಂತೆ ಮಾಡಿದರು. ಬೆಂಗಳೂರಿನ ಬೆಳವಣಿಗೆಗೆ ಅಂತರರಾಷ್ಟ್ರೀಯ ವಿಮಾನ ಸಂಪರ್ಕ ಎಷ್ಟು ಅಗತ್ಯ ಎಂಬುದನ್ನು ಮನಗಂಡು, ಹೊಸ ವಿಮಾನ ನಿಲ್ದಾಣ ಯೋಜನೆಯನ್ನು ಮುಂದುವರಿಸಲು ಶ್ರಮಿಸಿದರು. ವಿಮಾನಯಾನದ ವಿಸ್ತರಣೆಯಿಂದ ಉದ್ಯಮ, ಪ್ರವಾಸೋದ್ಯಮ, ಕೃಷಿ ಉತ್ಪನ್ನಗಳ ಸಾಗಣೆ ಮತ್ತು ಉದ್ಯೋಗಾವಕಾಶಗಳಿಗೆ ದೊರೆಯುವ ನೆರವನ್ನೂ ಅವರ ಅಭಿವೃದ್ಧಿ ದೃಷ್ಟಿ ಒಳಗೊಂಡಿತ್ತು.

ನಗರಾಭಿವೃದ್ಧಿಯ ವಿಷಯದಲ್ಲಿಯೂ ಸಾಮಾನ್ಯ ನಾಗರಿಕರ ಬದುಕೇ ಅವರ ಗಮನದ ಕೇಂದ್ರವಾಗಿತ್ತು. ಸಾರ್ವಜನಿಕ ಸಾರಿಗೆ, ವಸತಿ ಮತ್ತು ಮೂಲಸೌಕರ್ಯಗಳ ಅಗತ್ಯವನ್ನು ಸಮಗ್ರವಾಗಿ ನೋಡುವ ಪ್ರಯತ್ನ ಮಾಡಿದ ಅವರು, ಬೆಂಗಳೂರು ಮೆಟ್ರೋ ಸೇರಿದಂತೆ ನಗರ ಸಾರಿಗೆ ಯೋಜನೆಗಳಿಗೆ ಬೆಂಬಲ ನೀಡಿದರು ಹಾಗೂ ಬಡ ಕುಟುಂಬಗಳಿಗೆ ವಸತಿ ಕಲ್ಪಿಸುವ ಉಪಕ್ರಮಗಳಿಗೂ ಮಹತ್ವ ನೀಡಿದರು. ಬೆಂಗಳೂರನ್ನು ಪ್ರತಿನಿಧಿಸುತ್ತಿದ್ದರೂ ಹುಬ್ಬಳ್ಳಿ-ಧಾರವಾಡ ಸೇರಿದಂತೆ ರಾಜ್ಯದ ಇತರ ಭಾಗಗಳ ಅಭಿವೃದ್ಧಿಯ ಬಗ್ಗೆ ಅವರು ಹೊಂದಿದ್ದ ಆಸಕ್ತಿ, ಅವರ ದೃಷ್ಟಿಯ ವ್ಯಾಪಕತೆಯನ್ನು ಎತ್ತಿ ತೋರಿಸುತ್ತದೆ.

ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಸಚಿವರಾಗಿ ರೈತರಿಗೆ ರಸಗೊಬ್ಬರ ಲಭ್ಯತೆ ಸುಧಾರಿಸುವುದು, ಬೇವುಲೇಪಿತ ಯೂರಿಯಾದ ಬಳಕೆಯನ್ನು ವಿಸ್ತರಿಸುವುದು ಮತ್ತು ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಪ್ರಯತ್ನಗಳಿಗೆ ಅವರು ಒತ್ತು ನೀಡಿದರು. ಇದೇ ಅವಧಿಯಲ್ಲಿ ಜನೌಷಧಿ ಯೋಜನೆಯ ವಿಸ್ತರಣೆ, ಕಡಿಮೆ ದರದಲ್ಲಿ ಗುಣಮಟ್ಟದ ಜೆನೆರಿಕ್ ಔಷಧಿಗಳ ಲಭ್ಯತೆ ಹಾಗೂ ಹೃದಯದ ಸ್ಟೆಂಟ್‌ಗಳು ಮತ್ತು ಮೊಣಕಾಲು ಬದಲಿ ಇಂಪ್ಲಾಂಟ್‌ಗಳ ಬೆಲೆ ನಿಯಂತ್ರಣದ ಕ್ರಮಗಳು ಜನಸಾಮಾನ್ಯರ ಗಮನ ಸೆಳೆದವು. ಆಡಳಿತಾತ್ಮಕ ನಿರ್ಧಾರಗಳು ಕುಟುಂಬಗಳ ದೈನಂದಿನ ಖರ್ಚಿನ ಮೇಲೂ ನೇರ ಪರಿಣಾಮ ಬೀರಬಲ್ಲವು ಎಂಬುದಕ್ಕೆ ಇವು ಜ್ವಲಂತ ಉದಾಹರಣೆಗಳಾದವು.

ಸಂಸದೀಯ ವ್ಯವಹಾರಗಳ ಸಚಿವರಾಗಿ ಅನಂತಕುಮಾರ್ ಅವರ ಸಂವಾದ ಮತ್ತು ಸಮನ್ವಯದ ಸಾಮರ್ಥ್ಯ ಮತ್ತಷ್ಟು ಎದ್ದುಕಾಣಿಸಿತು. ವಿವಿಧ ಪಕ್ಷಗಳ ನಾಯಕರೊಂದಿಗೆ ಮಾತುಕತೆ ನಡೆಸುವುದು, ಭಿನ್ನಾಭಿಪ್ರಾಯಗಳನ್ನು ತಾಳ್ಮೆಯಿಂದ ಆಲಿಸುವುದು ಮತ್ತು ಪ್ರಮುಖ ಶಾಸನಗಳ ಕುರಿತು ಸಹಕಾರ ಪಡೆಯುವುದು ಅವರ ಜವಾಬ್ದಾರಿಯ ಭಾಗವಾಗಿತ್ತು. ತಮ್ಮ ವೈಚಾರಿಕ ನಿಲುವಿನಲ್ಲಿ ದೃಢವಾಗಿದ್ದರೂ ವೈಯಕ್ತಿಕ ಸಂಬಂಧಗಳಲ್ಲಿ ಗೌರವ ಕಾಪಾಡಿಕೊಂಡ ಅವರ ನಡೆ, ಎದುರಾಳಿಯ ಮಾತನ್ನೂ ಆಲಿಸುವ ಗುಣ ಪರಿಣಾಮಕಾರಿ ನಾಯಕತ್ವಕ್ಕೆ ಎಷ್ಟು ಅಗತ್ಯ ಎಂಬುದನ್ನು ತಿಳಿಸಿತು.

### ಕನ್ನಡಪ್ರೇಮ ಮತ್ತು ಆಧುನಿಕ ಚಿಂತನೆ


ರಾಷ್ಟ್ರ ರಾಜಕಾರಣದಲ್ಲಿ ಸಕ್ರಿಯರಾಗಿದ್ದ ಅನಂತಕುಮಾರ್ ಅವರಿಗೆ ಕನ್ನಡದ ಬಗ್ಗೆ ಆಳವಾದ ಅಭಿಮಾನವಿತ್ತು. ಸಂಸತ್ತಿನಲ್ಲಿ ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸುವುದರಿಂದ ಹಿಡಿದು ರಾಷ್ಟ್ರೀಯ ನಾಯಕರ ಭಾಷಣಗಳನ್ನು ಜನರಿಗೆ ಸರಳವಾಗಿ ತಲುಪಿಸುವವರೆಗೆ ಅವರ ಭಾಷಾಪ್ರೇಮ ಹಲವು ರೀತಿಯಲ್ಲಿ ವ್ಯಕ್ತವಾಯಿತು. ಓದು, ವಿಚಾರವಿನಿಮಯ ಮತ್ತು ಹೊಸ ತಂತ್ರಜ್ಞಾನಗಳ ಬಗ್ಗೆ ಆಸಕ್ತಿ ಹೊಂದಿದ್ದ ಅವರು, ಬದಲಾಗುತ್ತಿರುವ ಸಮಾಜದ ಅಗತ್ಯಗಳನ್ನು ತಿಳಿದುಕೊಳ್ಳಲು ಸದಾ ಉತ್ಸುಕರಾಗಿದ್ದರು. ಅವರ ಭಾಷಣಗಳಲ್ಲಿ ವಿಷಯದ ಸ್ಪಷ್ಟತೆಯ ಜೊತೆಗೆ ಜನರೊಂದಿಗೆ ಆತ್ಮೀಯವಾಗಿ ಮಾತನಾಡುವ ಸಹಜತೆಯೂ ಎದ್ದುಕಾಣುತ್ತಿತ್ತು.

ಸಾರ್ವಜನಿಕ ಬದುಕಿನ ಈ ಎಲ್ಲ ಚಟುವಟಿಕೆಗಳ ನಡುವೆಯೂ ಕುಟುಂಬದೊಂದಿಗಿನ ಅವರ ಬಾಂಧವ್ಯ ಆತ್ಮೀಯವಾಗಿಯೇ ಉಳಿದಿತ್ತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರೊಂದಿಗೆ ಹಂಚಿಕೊಂಡ ಜೀವನದಲ್ಲಿ ಕುಟುಂಬ ಮತ್ತು ಸಮಾಜಸೇವೆ ಪರಸ್ಪರ ಬೆಸೆದುಕೊಂಡಿದ್ದವು. ಕಾರ್ಯಕರ್ತರು, ಸಹೋದ್ಯೋಗಿಗಳು ಮತ್ತು ನೆರವು ಅರಸಿ ಬರುವ ಜನರಿಗೆ ಅವರ ಮನೆಯಲ್ಲಿ ಸದಾ ಆತ್ಮೀಯ ಸ್ವಾಗತವಿತ್ತು. ಪುತ್ರಿಯರಾದ ಐಶ್ವರ್ಯಾ ಮತ್ತು ವಿಜೇತಾ ಅವರೊಂದಿಗಿನ ಪ್ರೀತಿ, ಕುಟುಂಬದ ಸಣ್ಣ ಸಂತೋಷಗಳಿಗೆ ನೀಡುತ್ತಿದ್ದ ಮಹತ್ವ ಹಾಗೂ ಬಿಡುವಿಲ್ಲದ ಪ್ರವಾಸಗಳ ನಡುವೆಯೂ ಉಳಿಸಿಕೊಂಡ ಸಂವಹನ, ಅವರ ವ್ಯಕ್ತಿತ್ವದ ಮೃದು ಮುಖವನ್ನು ನಮಗೆ ಪರಿಚಯಿಸುತ್ತವೆ.

ತಾಯಿ ಗಿರಿಜಾ ಶಾಸ್ತ್ರಿ ಅವರ ಸ್ಮರಣಾರ್ಥ ಸ್ಥಾಪನೆಯಾದ ಅದಮ್ಯ ಚೇತನ, ಅನಂತಕುಮಾರ್ ಅವರ ಸೇವಾ ಚಿಂತನೆಗೆ ಸಾಂಸ್ಥಿಕ ರೂಪ ನೀಡಿತು. ಅನ್ನ, ಅಕ್ಷರ, ಆರೋಗ್ಯ, ಪ್ರಕೃತಿ ಮತ್ತು ಸಂಸ್ಕೃತಿಯ ಕಾಳಜಿಯನ್ನು ಒಳಗೊಂಡ ಈ ಸಂಸ್ಥೆಯ ಕಾರ್ಯಗಳಲ್ಲಿ ಶಾಲಾ ಮಕ್ಕಳಿಗೆ ಬಿಸಿಯೂಟ ನೀಡುವ ಸೇವೆ ಪ್ರಮುಖವಾದುದು. ಆಹಾರ ತಯಾರಿಕೆಯಲ್ಲಿ ಪರಿಸರಸ್ನೇಹಿ ವಿಧಾನಗಳು, ಸಂಪನ್ಮೂಲಗಳ ಮಿತಬಳಕೆ ಮತ್ತು ತ್ಯಾಜ್ಯ ಕಡಿತಕ್ಕೆ ನೀಡಿದ ಗಮನ, ಸೇವೆಯೊಂದಿಗೆ ಪರಿಸರದ ಜವಾಬ್ದಾರಿಯನ್ನೂ ಬೆಸೆದಿದೆ.







ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ನೇತೃತ್ವದಲ್ಲಿ ಇಂದಿಗೂ ಮುಂದುವರಿಯುತ್ತಿರುವ ಅದಮ್ಯ ಚೇತನದ ಕಾರ್ಯಗಳಲ್ಲಿ ನಿತ್ಯ ಅನ್ನದಾನ, ಸಸ್ಯಾಗ್ರಹ ಮತ್ತು ಪ್ಲೇಟ್ ಬ್ಯಾಂಕ್‌ನಂತಹ ಉಪಕ್ರಮಗಳು ಜನಸಾಮಾನ್ಯರ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಿವೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ನಡೆದ ಆಹಾರ ವಿತರಣೆಯೂ ಸಂಸ್ಥೆಯ ಸೇವಾ ಬದ್ಧತೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿತು. ಹಸಿದವರಿಗೆ ಊಟ ನೀಡುವುದು, ಸಸ್ಯಾಗ್ರಹ, ಪ್ಲೇಟ್ ಬ್ಯಾಂಕ್ — ಇಂತಹ ದೈನಂದಿನ ಕಾರ್ಯಗಳ ಮೂಲಕವೂ ಸಮಾಜದ ಒಳಿತಿಗೆ ಕೊಡುಗೆ ನೀಡಬಹುದು ಎಂಬುದನ್ನು ಈ ಪ್ರಯತ್ನಗಳು ಸಾಬೀತುಪಡಿಸುತ್ತವೆ.

### ಮುಂದಿನ ಪೀಳಿಗೆಗೆ ಪಾಠಗಳು

ಅನಂತಕುಮಾರ್ ಅವರ ಬದುಕಿನಿಂದ ಇಂದಿನ ಯುವಜನತೆ ಮತ್ತು ಸಾರ್ವಜನಿಕ ಕಾರ್ಯಕರ್ತರು ಕಲಿಯಬಹುದಾದ ಪಾಠಗಳು ಅನೇಕ: ವಹಿಸಿಕೊಂಡ ಕೆಲಸಕ್ಕೆ ಶ್ರದ್ಧೆಯಿಂದ ಸಿದ್ಧತೆ ನಡೆಸುವುದು, ವಿವರಗಳಿಗೆ ಸೂಕ್ಷ್ಮ ಗಮನ ಕೊಡುವುದು, ಸಹೋದ್ಯೋಗಿಗಳ ಸಾಮರ್ಥ್ಯವನ್ನು ಪೋಷಿಸಿ ಬೆಳೆಸುವುದು ಮತ್ತು ಭಿನ್ನಾಭಿಪ್ರಾಯಗಳ ನಡುವೆಯೂ ಮಾನವ ಸಂಬಂಧಗಳನ್ನು ಉಳಿಸಿಕೊಳ್ಳುವುದು — ಇವು ಅವುಗಳಲ್ಲಿ ಪ್ರಮುಖವಾದವು. ದೊಡ್ಡ ಜವಾಬ್ದಾರಿಗಳನ್ನು ನಿರ್ವಹಿಸುವಾಗಲೂ ಸಾಮಾನ್ಯ ವ್ಯಕ್ತಿಯ ಸಮಸ್ಯೆಯನ್ನು ಗಮನಿಸುವ ಸಂವೇದನಾಶೀಲತೆ, ಅವರ ನಾಯಕತ್ವಕ್ಕೆ ಒಂದು ವಿಶಿಷ್ಟ ಮಾನವೀಯ ಸ್ಪರ್ಶವನ್ನು ನೀಡಿತು.

ಸೆಪ್ಟೆಂಬರ್ 22ರ ಅವರ ಜನ್ಮದಿನವು ಈ ಎಲ್ಲ ಗುಣಗಳನ್ನು ಮತ್ತೆ ನೆನಪಿಸಿಕೊಳ್ಳುವ: ರೂಢಿಸಿಕೊಳ್ಳುವ ಸಂದರ್ಭ. ಅನಂತಕುಮಾರ್ ಅವರ ಬದುಕಿನ ವಿವಿಧ ಆಯಾಮಗಳನ್ನು ಓದುಗರಿಗೆ ಪರಿಚಯಿಸುವ 'ಅನಂತಪಥ'ದ ಪ್ರಯತ್ನವೂ, ಆ ಸೇವಾ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಆಶಯ ಹೊಂದಿದೆ. ಅವರು ಬೆಳೆಸಿದ ಸಂಸ್ಥೆಗಳಲ್ಲಿ, ಪ್ರೇರೇಪಿಸಿದ ಕಾರ್ಯಕರ್ತರಲ್ಲಿ ಮತ್ತು ಇಂದಿಗೂ ಮುಂದುವರಿಯುತ್ತಿರುವ ಸೇವಾಕಾರ್ಯಗಳಲ್ಲಿ ಅವರ ಚಿಂತನೆ ಜೀವಂತವಾಗಿದೆ. ಅವರ ಸ್ಮರಣೆಗೆ ನಾವು ಸಲ್ಲಿಸಬಹುದಾದ ಅರ್ಥಪೂರ್ಣ ಗೌರವವೆಂದರೆ, ನಮ್ಮ ಪಾಲಿನ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ಸಮಾಜಕ್ಕೆ ಉಪಯುಕ್ತವಾದ ಕೆಲಸದಲ್ಲಿ ನಿರಂತರವಾಗಿ ತೊಡಗಿಕೊಳ್ಳುವುದು. •

# ಪಂಡಿತ ದೀನದಯಾಳ ಉಪಾಧ್ಯಾಯ

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಂಗ್ರೆಸ್ ಪಕ್ಷವು ದೇಶವನ್ನು ಆಳುವುದು ತನ್ನ ಹಕ್ಕು ಎಂದು ಭಾವಿಸಿಕೊಂಡಿತ್ತು. ಪಕ್ಷದಲ್ಲೂ ನೆಹರೂ ಬಿಟ್ಟರೆ ಅನ್ಯ ನಾಯಕರ ಮಾತುಗಳಿಗೆ ಬೆಲೆಯೇ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಭಿನ್ನ ವಿಚಾರಧಾರೆಯ ಅನೇಕರು ಕಾಂಗ್ರೆಸ್ ಪಕ್ಷದಿಂದ ಹೊರಬಂದು ಬೇರೆ ಬೇರೆ ಪಕ್ಷಗಳನ್ನು ಕಟ್ಟಿದರು. ಇದೇ ಕಾಲದಲ್ಲಿ ಭಾರತದ ಸಂಸ್ಕೃತಿಯನ್ನು ಅಭಿವ್ಯಕ್ತಿಸುವ ಪಕ್ಷವೊಂದರ ಅಗತ್ಯವನ್ನು ಮನಗಂಡ ಶ್ಯಾಮಪ್ರಸಾದ ಮುಖರ್ಜಿಯವರು ಭಾರತೀಯ ಜನಸಂಘವನ್ನು ಡಿಸೆಂಬರ್ ೧೯೫೧ರಲ್ಲಿ ಸ್ಥಾಪನೆ ಮಾಡಿದರು. ಆಗ ಸರಸಂಘಚಾಲಕ ಗುರೂಜಿ ಗೋಳ್ವಲ್ಕರರ ಸಲಹೆಯ ಮೇರೆಗೆ ದೀನದಯಾಳ ಉಪಾಧ್ಯಾಯರು ಮುಖರ್ಜಿಯವರ ಜೊತೆಗೂಡಿದರು, ಭಾರತೀಯ ಜನಸಂಘದ ಆತ್ಮವೇ ಆದರು.



### ಪರೀಕ್ಷೆಯಿಲ್ಲದೆ ಪಂಡಿತ

ಎಂಟು ವರ್ಷ ವಯಸ್ಸಿಗೆ ತಂದೆ ತಾಯಿ ಇಬ್ಬರನ್ನೂ ಕಳೆದುಕೊಂಡ ದೀನದಯಾಳ ಉಪಾಧ್ಯಾಯರು ಪರಪುಟ್ಟನಾಗಿಯೇ ಬೆಳೆದು ಲೋಕವನ್ನೇ ತಮ್ಮ ಮನೆಯನ್ನಾಗಿಸಿಕೊಂಡರು. ೧೯೧೬ರಲ್ಲಿ ಉತ್ತರಪ್ರದೇಶದ ಮಥುರಾದಲ್ಲಿ ಜನಿಸಿದ ಉಪಾಧ್ಯಾಯರು ಯಾವುದೇ ಪರೀಕ್ಷೆಯನ್ನು ಪಾಸ್ ಮಾಡಿ ಪಂಡಿತರೆನಿಸಿಕೊಂಡವರಲ್ಲ. ಆಂಗ್ಲಭಾಷೆಯಲ್ಲಿ ಬಿಎ ಮಾಡಿದ ನಂತರ ಎಂಎ ಓದುತ್ತಿದ್ದಾಗ ವೈಯಕ್ತಿಕ ಕಾರಣಗಳಿಂದ ಓದು ನಿಲ್ಲಿಸಬೇಕಾಯಿತು. ಆಗ ಸರ್ಕಾರಿ ಸೇವೆಯನ್ನು ಸೇರುವ ಉದ್ದೇಶದಿಂದ ೧೯೪೨ರಲ್ಲಿ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ತೆಗೆದುಕೊಂಡರು. ಪರೀಕ್ಷೆಗೆ ಹಾಜರಾದ ಎಲ್ಲರೂ ಕೋಟು, ಪ್ಯಾಂಟು, ಟೈ, ಟೋಪಿ ಧರಿಸಿ ಹಾಜರಾಗಿದ್ದರೆ ಇವರು ಧೋತಿ, ಕುರ್ತಾ ಮತ್ತು ಟೋಪಿ ಧರಿಸಿ ಹಾಜರಾಗಿದ್ದರು. ಆಗ ಎಲ್ಲರೂ ಇವರನ್ನು ಪಂಡಿತಜೀ ಎಂದು ಹಾಸ್ಯ ಮಾಡಿದ್ದರು. ಮುಂದೆ ಇದೇ ಅವರ ಹೆಸರಿಗೂ ಅಂಟಿಕೊಂಡಿತು. ಪರೀಕ್ಷೆಯಲ್ಲಿ ಮೊದಲಿಗರಾಗಿ ಉತ್ತೀರ್ಣರಾದರೂ ಉದ್ಯೋಗಕ್ಕೆ ಸೇರದೆ ಆರ್‌ಎಸ್‌ಎಸ್‌ನ ಪೂರ್ಣಾವಧಿ ಆಜೀವನ ಕಾರ್ಯಕರ್ತರಾದರು.

### ದೀನದಯಾಳು

ಅವರು ಹೆಸರಿಗೆ ತಕ್ಕಂತೆ ದೀನದಯಾಳುಗಳೇ ಆಗಿದ್ದರು. ಸಮಾಜವ್ಯವಸ್ಥೆಯ ಕೊನೆಯ ಅಂಚಿನಲ್ಲಿರುವ ವ್ಯಕ್ತಿಯು ಉದ್ಧಾರವಾಗಬೇಕಾದರೆ ಉನ್ನತ ಶ್ರೇಣಿಯಲ್ಲಿರುವ ಜನರು ಶೋಷಿತರಿಗೆ ಮತ್ತು ಅಲಕ್ಷಿತ ಜನರಿಗೆ ಆಧಾರವಾಗಬೇಕು ಎಂದು ಅವರು ಬಲವಾಗಿ ನಂಬಿದ್ದರು. ಈ ನಿಟ್ಟಿನಲ್ಲಿ "ರಾಷ್ಟ್ರವೂ ಮಾನವ ಜೀವಿಯಂತೆ ತನ್ನದೇ ಆದ ಒಂದು ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮವನ್ನು ಹೊಂದಿರುತ್ತದೆ" ಎಂಬ ಅವರ ರಾಷ್ಟ್ರಪುರುಷನ ನಿರೂಪಣೆ ಗಮನಾರ್ಹ. ಈ ಪರಿಕಲ್ಪನೆಯು ಏಕಾತ್ಮ ಮಾನವತಾವಾದ ಎಂಬ ಹೆಸರಿನಿಂದ ಪ್ರಸಿದ್ಧಿಪಡೆಯಿತು. ಹೊಸ ಪಕ್ಷವೊಂದರ ಸ್ಥಾಪನೆಗೆ ಕಾರಣವಾದ "ಸಮಗ್ರ ಮಾನವತೆ" ಎಂಬ ಬೀಜದ ಮೂಲವಿರುವುದು ಈ ರಾಷ್ಟ್ರಪುರುಷನ ಕಲ್ಪನೆಯಲ್ಲಿಯೇ. ದೇಹದ ಒಂದು ಭಾಗಕ್ಕೆ ತೊಂದರೆಯಾದರೆ ಇತರ ಭಾಗಗಳೂ ಅದರ ಪರಿಣಾಮವನ್ನು ಎದುರಿಸುತ್ತವೆ; ಅದರ ರಕ್ಷಣೆಗೆ ಧಾವಿಸುತ್ತವೆ. ಅದೇ ರೀತಿ, ರಾಷ್ಟ್ರದ ಒಂದು ಪ್ರದೇಶ ಅಥವಾ ಜನವರ್ಗ ತೊಂದರೆಗೊಳಗಾದರೆ ಇಡೀ ರಾಷ್ಟ್ರ ಒಂದಾಗಿ ಬೆಂಬಲಕ್ಕೆ ಎದ್ದು ನಿಲ್ಲಬೇಕು. ಈ ಹಿನ್ನೆಲೆಯಲ್ಲಿ ದುರ್ಬಲರಿಗೆ ಬೇಕಾಗಿರುವುದು ಕರುಣೆಯಲ್ಲ, "ಅವರಿಗೆ ಸತ್ಕಾರವೂ ಬೇಡ, ತಿರಸ್ಕಾರವೂ ಬೇಡ; ಅವರಿಗೆ ಅಧಿಕಾರವನ್ನು ನೀಡಿ" ಎಂದು ಸ್ಪಷ್ಟವಾಗಿ ಅವರು ಹೇಳಿದ್ದರು.

### ದೂರದರ್ಶಿ ಉಪಾಧ್ಯಾಯ

ಆಧುನಿಕ ಭಾರತದಲ್ಲಿ "ವರ್ಗರಹಿತ, ಜಾತಿರಹಿತ ಮತ್ತು ಸಂಘರ್ಷಮುಕ್ತ ಸಾಮಾಜಿಕ ವ್ಯವಸ್ಥೆ" ಇರಬೇಕು ಎಂಬ ಕನಸನ್ನು ಇರಿಸಿಕೊಂಡು ೧೯೫೧ರಿಂದ ೧೯೬೮ರ ವರೆಗೆ ಅಹರ್ನಿಶಿ ಪಕ್ಷಕ್ಕಾಗಿ ದೀನದಯಾಳು ಅವರು ದುಡಿದರು. "ದೇಶದ ರಕ್ಷಣೆಗೆ, ಜನತೆಯಲ್ಲಿ ರಾಷ್ಟ್ರೀಯತೆಯ ಉದ್ದೀಪನೆಗೆ, ಆಡಳಿತದಲ್ಲಿ ಸಾಮಾಜಿಕ ಸಮಾನತೆಗೆ ಮತ್ತು ಪ್ರಜಾಪ್ರಭುತ್ವದ ವಿಕೇಂದ್ರೀಕರಣಕ್ಕೆ ಭಾರತೀಯ ಜನಸಂಘವು ಪ್ರಯತ್ನಿಸಬೇಕು." ಎಂಬ ಆದರ್ಶಕ್ಕೆ ಅನುಗುಣವಾಗಿ ಪಕ್ಷವನ್ನು ಅವರು ಸಂಘಟಿಸಿದರು. ನೆಹರೂ ನಿಧನರಾದ ಮೇಲೆ ಕಾಂಗ್ರೆಸ್ ವಿಘಟನೆಯ ಹಾದಿಯಲ್ಲಿತ್ತು. ಆಗ ವಿರೋಧ ಪಕ್ಷದ ಅತಿರಥ ಮಹಾರಥರೆಲ್ಲರೂ ಒಗ್ಗಟ್ಟಾಗಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದರು. ಉಪಾಧ್ಯಾಯರು ಮಾತ್ರ "ವಿಘಟಿತವಾದ ದುರ್ಬಲವಾದ ಪಕ್ಷವನ್ನು ಸೋಲಿಸುವುದು ಮಾತ್ರವೇ ನಮ್ಮ ಗುರಿಯಾಗಬಾರದು, ಕಾಂಗ್ರೆಸ್ ಪಕ್ಷದ ನೀತಿಗಳಿಗೆ ಪರ್ಯಾಯವಾದ ಕಾರ್ಯಕ್ರಮಗಳನ್ನು ನಿರೂಪಿಸಿ ಅದರ ಮೂಲಕ ಜನಬೆಂಬಲವನ್ನು ಗಳಿಸಿ ಸಕಾರಾತ್ಮಕ ರೀತಿಯಲ್ಲಿ ಅಧಿಕಾರಕ್ಕೆ ಬರಬೇಕು" ಎಂಬ ನಿಲುವನ್ನು ತಾಳಿದ್ದರು. "ನಮ್ಮ ಇತಿಹಾಸದ ಮೇಲೆ ನಮಗೆ ಹೆಮ್ಮೆಯಿದೆ. ಈ ಹೆಮ್ಮೆಯು ನಮಗೆ ಸ್ಫೂರ್ತಿ ನೀಡುತ್ತಿದೆ. ನಮಗೆ ಭವಿಷ್ಯದ ಕನಸುಗಳಿವೆ. ನಮ್ಮ ಕನಸುಗಳನ್ನು ನನಸಾಗಿಸಲು ಪ್ರಯತ್ನಿಸುವ ಕರ್ಮಯೋಗಿಗಳು ನಾವು. ಅಂತಿಮ ಜಯದ ಮೇಲೆ ನಮಗೆ ವಿಶ್ವಾಸವಿದೆ. ಇದಕ್ಕಾಗಿ ಯಾವುದೇ ತ್ಯಾಗಕ್ಕೂ ನಾವು ಸಿದ್ಧ." ಎಂಬುದು ಅವರ ಧೀರವಾಣಿ.

### ದೂರದರ್ಶಿ ಉಪಾಧ್ಯಾಯ

ದೀನದಯಾಳ ಉಪಾಧ್ಯಾಯರು ನುಡಿನಡೆಗಳಲ್ಲಿ ಭೇದವಿಲ್ಲದವರು. ರಾಜಕಾರಣದಲ್ಲಿಯೂ ಶುದ್ಧಚಾರಿತ್ರ್ಯದ ಪ್ರತಿಪಾದಕರಾಗಿದ್ದ ಅವರು ರಾಷ್ಟ್ರದ ಭದ್ರತೆಯ ವಿಷಯ ಬಂದಾಗ ರಾಷ್ಟ್ರಹಿತವೇ ಸರ್ವೋಪರಿ ಎಂದು ಭಾವಿಸಿದ್ದರು. ರಾಜಕೀಯ ಲಾಭನಷ್ಟಗಳ ಲೆಕ್ಕಾಚಾರಕ್ಕಿಂತ ದೇಶದ ಸಮಗ್ರತೆ ಮತ್ತು ಭದ್ರತೆ ನಮ್ಮ ಗಮನದಲ್ಲಿರಬೇಕು, ದೇಶವನ್ನು ಕಾಡುತ್ತಿರುವ ಹಸಿವು ಮತ್ತು ಬಡತನ ನಮ್ಮ ಗಮನದ ಕೇಂದ್ರ ಬಿಂದುವಾಗಬೇಕು ಎಂದು ಬಲವಾಗಿ ವಾದಿಸುತ್ತಿದ್ದರು.

### ಪಕ್ಷವೇ ಬದುಕು

1951ರ ಡಿಸೆಂಬರ್ ತಿಂಗಳಲ್ಲಿ ಶ್ಯಾಮಪ್ರಸಾದ ಮುಖರ್ಜಿಯವರ ಜೊತೆಗೂಡಿ ಭಾರತೀಯ ಜನಸಂಘದ ಸ್ಥಾಪನೆಗೆ ಕಾರಣರಾದರು. 1953ರಲ್ಲಿ ಮುಖರ್ಜಿಯವರು ನಿಧನರಾದಾಗ ಜನಸಂಘದ ಕಥೆ ಮುಗಿಯಿತು ಎಂದು ಭಾವಿಸಿಕೊಂಡವರಿಗೆ ನಿರಾಶೆಯಾಗುವ ರೀತಿಯಲ್ಲಿ ಪಕ್ಷಕ್ಕೆ ತಾತ್ವಿಕ ನೆಲೆಗಟ್ಟು ಒದಗಿಸಿ ಬೆನ್ನೆಲುಬಾಗಿ ನಿಂತರು. 1951ರಿಂದ ಸತತವಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಮುಂದೆ, ದೇಶದ ಪ್ರಮುಖ ರಾಷ್ಟ್ರೀಯ ಪಕ್ಷವಾಗಿ ಗುರುತಿಸಿಕೊಂಡ ಭಾರತೀಯ ಜನಸಂಘವು ದೇಶದ ಎರಡನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಸಂಸತ್ತಿನಲ್ಲಿ ಅದರ 35 ಸದಸ್ಯರಿದ್ದುದಲ್ಲದೆ ಅನೇಕ ರಾಜ್ಯಗಳ ಸ್ಥಳೀಯ ಸಂಘಗಳಲ್ಲಿ ಅದರ ಚುನಾಯಿತ ಸದಸ್ಯರಿದ್ದರು. ಮುಂದೆ ಅದೇ ಪಕ್ಷವು ಭಾರತೀಯ ಜನತಾ ಪಕ್ಷವಾಗಿ ರೂಪಾಂತರಗೊಂಡು ದೇಶದ ಆಡಳಿತ ಸೂತ್ರವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿದೆಯೆಂದರೆ ಪಂಡಿತ ದೀನದಯಾಳ ಉಪಾಧ್ಯಾಯರ ದೂರದೃಷ್ಟಿಯನ್ನು ಮೆಚ್ಚಲೇಬೇಕು. ಆದರೆ, ದೀನದಯಾಳರು ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು ಕೇವಲ 43 ದಿನಗಳ ತನಕ ಮಾತ್ರವೇ!

1968ರ ಫೆಬ್ರವರಿ 10/11ರ ರಾತ್ರಿ ಮೊಘಲ್ ಸರಾಯ್ ನಿಲ್ದಾಣದ ಬಳಿ ದೀನದಯಾಳ ಉಪಾಧ್ಯಾಯರ ಮೃತದೇಹ ಪತ್ತೆಯಾದಾಗ ಇಡೀ ದೇಶಕ್ಕೇ ಆಘಾತಕರ ಸುದ್ದಿಯೆನಿಸಿತು. ಅವರು ಪ್ರಯಾಣಿಸುತ್ತಿದ್ದ ರೈಲಿನಿಂದ ಅವರನ್ನು ಹೊರತಳ್ಳಿ ಸಾಯಿಸಲಾಗಿತ್ತು. ಆದರೆ, ಕೊಲೆಯ ನಿಖರವಾದ ಕಾರಣ, ಸಂಚುಗಳು ಬಹಿರಂಗವಾಗದೆ ದೀನದಯಾಳರ ಬದುಕಿನೊಡನೆ ಅವರ ಸಾವಿನ ರಹಸ್ಯವೂ ಕಣ್ಮರೆಯಾಗಿ ಹೋಯಿತು. ಧೀಮಂತ ದೀನದಯಾಳ ಉಪಾಧ್ಯಾಯರ ಬದುಕು ದುರಂತದಲ್ಲಿ ಕೊನೆಗೊಳ್ಳುವಂತಾಯಿತು "ಧರ್ಮವು ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ" ಎಂಬುದು ದೀನದಯಾಳರ ಸಂದೇಶ. ಅವರು ಕಂಡ ಅಖಂಡ ಭಾರತದ ಕನಸನ್ನು ಸಾಕಾರಗೊಳಿಸುವ ಹೊಣೆ ನಮ್ಮ ಮೇಲಿದೆ.

**-ಕೆ ಜನಾರ್ದನ ತುಂಗ**




ನವಪೀಳಿಗೆಯಲ್ಲಿ ಪರಿಸರ ಪ್ರಜ್ಞೆ, ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರಾಭಿಮಾನದ ಮೌಲ್ಯಗಳನ್ನು ಬೆಳೆಸುವ ಮಹತ್ವಾಕಾಂಕ್ಷೆಯೊಂದಿಗೆ ಅನಂತಕುಮಾರ್ ಪ್ರತಿಷ್ಠಾನವು ರೂಪಿಸಿರುವ 'ಯುವ ರಾಯಭಾರಿಗಳ ಉಪಕ್ರಮ'ವು 2026ರ ಆಗಸ್ಟ್ 29ರಂದು ಯಶಸ್ವಿಯಾಗಿ ನೆರವೇರಿತು. ಇದು ಕೇವಲ ತರಬೇತಿ ಕಾರ್ಯಕ್ರಮವಲ್ಲ; ಮಕ್ಕಳಲ್ಲಿ ನಾಯಕತ್ವ, ಕರ್ತವ್ಯಪ್ರಜ್ಞೆ ಮತ್ತು ಸಮಾಜಸೇವೆಯ ಮನೋಭಾವವನ್ನು ಬೆಳೆಸುವ ಮಹತ್ವದ ಹೆಜ್ಜೆಯಾಗಿದೆ. ವಿವಿಧ ಶಾಲೆಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು.

ಕಾರ್ಯಕ್ರಮದಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ತಮ್ಮ ಇಸ್ರೇಲ್ ಪ್ರವಾಸದ ಅನುಭವಗಳನ್ನು ಹಂಚಿಕೊಂಡರು. ಇಸ್ರೇಲ್‌ನ ಇತಿಹಾಸ, ಅಲ್ಲಿನ ಜನಜೀವನ, ಕಾರ್ಯಸಂಸ್ಕೃತಿ ಹಾಗೂ ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆಯ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿದರು. ದೇಶದ ಪ್ರಗತಿಯಲ್ಲಿ ನಾಗರಿಕರ ಜವಾಬ್ದಾರಿ ಮತ್ತು ಸ್ವಯಂಸೇವಾ ಮನೋಭಾವದ ಮಹತ್ವವನ್ನು ತಿಳಿಸಿದರು.

ನಂತರ ಶ್ರೀಮತಿ ಮೋಹಿನಿ ಆಚಾರ್ ಅವರು ಪರಿಸರ ಸಂರಕ್ಷಣೆ ಮತ್ತು ಇಂಗಾಲದ ಹೊರಸೂಸುವಿಕೆಯ ಕುರಿತು ಮಾಹಿತಿ ನೀಡಿದರು. ಮಾನವ ನಿರ್ಮಿತ ಚಟುವಟಿಕೆಗಳು, ವಾಹನಗಳು, ಕೈಗಾರಿಕೆಗಳು ಹಾಗೂ ಉಷ್ಣ ವಿದ್ಯುತ್ ಉತ್ಪಾದನೆಯಿಂದ ವಾತಾವರಣಕ್ಕೆ ಅಪಾರ ಪ್ರಮಾಣದ ಇಂಗಾಲದ ಡೈಆಕ್ಸೈಡ್ ($CO_2$) ಸೇರುತ್ತಿದ್ದು, ಪರಿಸರದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂದು ತಿಳಿಸಿದರು. ದೈನಂದಿನ ಜೀವನದಲ್ಲಿ ಬಳಸುವ ಸಿಮೆಂಟ್ ಮತ್ತು ವಿದ್ಯುತ್‌ನಿಂದಲೂ ಗಣನೀಯ ಪ್ರಮಾಣದಲ್ಲಿ ಇಂಗಾಲ ಹೊರಸೂಸಲ್ಪಡುತ್ತದೆ ಎಂದು ವಿವರಿಸಿದರು.

ಈ ಸಮಸ್ಯೆಗೆ ಪ್ರಕೃತಿದತ್ತ ಪರಿಹಾರವಾಗಿ ಗಿಡಮರಗಳು ಸಂಜೀವಿನಿಯಂತೆ ಕಾರ್ಯನಿರ್ವಹಿಸುತ್ತವೆ. ಒಂದು ಗಿಡವು ದಿನವೊಂದಕ್ಕೆ ಸರಾಸರಿ 27ರಿಂದ 68 ಗ್ರಾಂಗಳಷ್ಟು ಇಂಗಾಲದ ಡೈಆಕ್ಸೈಡ್ ಹೀರಿಕೊಂಡು ಗಾಳಿಯನ್ನು ಶುದ್ಧೀಕರಿಸುತ್ತದೆ. ಆದ್ದರಿಂದ ಸಾರ್ವಜನಿಕ ಸಾರಿಗೆಯ ಬಳಕೆ, ತ್ಯಾಜ್ಯದ ಮರುಬಳಕೆ ಹಾಗೂ ವ್ಯಾಪಕವಾಗಿ ಗಿಡಮರಗಳನ್ನು ನೆಟ್ಟು ಪೋಷಿಸುವ ಮೂಲಕ 'ನೆಟ್ ಜೀರೋ' ಗುರಿಯನ್ನು ಸಾಧಿಸಿ, ಹಸಿರು ಭವಿಷ್ಯವನ್ನು ನಿರ್ಮಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರು, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಎಲ್ಲರ ಉತ್ಸಾಹಭರಿತ ಪಾಲ್ಗೊಳ್ಳುವಿಕೆಯೊಂದಿಗೆ ಕಾರ್ಯಕ್ರಮ ಅರ್ಥಪೂರ್ಣವಾಗಿ ಸಮಾಪ್ತಿಯಾಯಿತು.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ, ಶ್ರೀಚೇತನ ಸಭೆ, ಇಕೋ ಅಂಗಡಿ, 40 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರಗಳಿಂದ ಉಚಿತ ಭೋಜನ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

## ಅದಮ್ಯ ಚೇತನ ತಿಂಗಳ ವರದಿ
### ಆಗಸ್ಟ್-ಸೆಪ್ಟೆಂಬರ್ 2026

**ಹಸಿರು ಭಾನುವಾರ :** ಅದಮ್ಯ ಚೇತನ ಸಂಸ್ಥೆಯ 'ಹಸಿರು ಭಾನುವಾರ' ಯೋಜನೆಯಡಿ 556ರಿಂದ 559ನೇ ಭಾನುವಾರದವರೆಗೆ ನಗರದ ವಿವಿಧ ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು.556, 557, 558 ಮತ್ತು 559ನೇ ಹಸಿರು ಭಾನುವಾರಗಳು ಕ್ರಮವಾಗಿ ಬನಶಂಕರಿ 6ನೇ ಹಂತದ 10ನೇ ಬ್ಲಾಕ್‌ನ ಜಟ್ಟಿಗರಹಳ್ಳಿಯ, ಮುನೇಶ್ವರ ದೇವಸ್ಥಾನದ ಆವರಣ, ಕೋಣನಕುಂಟೆಯ ನಾರಾಯಣ ನಗರದ 3ನೇ ಬ್ಲಾಕ್‌ನ ಬಿಡಿಎ ಪಾರ್ಕ್ ಆವರಣ, ನಾಗಪುರದ ವೆಸ್ಟ್ ಆಫ್ ಕಾರ್ಡ್ ರಸ್ತೆ 2ನೇ ಹಂತದ ಶ್ರೀ ಬಾಲಗಂಗಾಧರ ಸ್ವಾಮಿ ಉದ್ಯಾನವನದ ಆವರಣ, ಅದಮ್ಯ ಚೇತನ ಸಂಸ್ಥೆಯ ಆವರಣದಲ್ಲಿ ನಡೆದವು.

## ಗೋಡೆಯ ಮೇಲೊಂದು ಪತ್ರಿಕೆ... "ಅನಂತ ಚೇತನ"




ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ, ಜ್ಞಾನ ಮತ್ತು ಸೃಜನಶೀಲತೆಯನ್ನು ಬೆಳೆಸುವ ಉದ್ದೇಶದಿಂದ ಹೊರತರುತ್ತಿರುವ ವರ್ಣರಂಜಿತ ಗೋಡೆಪತ್ರಿಕೆ 'ಅನಂತ ಚೇತನ'ದ ನೂತನ ಸಂಚಿಕೆಯು ಕಳೆದ ತಿಂಗಳು ನೂರಾರು ಶಾಲೆಗಳನ್ನು ತಲುಪಿತು. ಶಾಲಾ ಆವರಣದ ಗೋಡೆಗಳಲ್ಲಿ ಪ್ರದರ್ಶಿಸಲಾದ ಸಂಚಿಕೆಯನ್ನು ವಿದ್ಯಾರ್ಥಿಗಳು ಅತ್ಯಂತ ಆಸಕ್ತಿ ಹಾಗೂ ಸಂತಸದಿಂದ ಓದಿದರು. ಶಿಕ್ಷಕರ ಮಾರ್ಗದರ್ಶನದಲ್ಲಿ ಗೋಡೆಪತ್ರಿಕೆಯಲ್ಲಿನ ಮಾಹಿತಿಯನ್ನು ತಿಳಿದುಕೊಂಡು, ಪರಸ್ಪರ ವಿಚಾರಗಳನ್ನು ಹಂಚಿಕೊಂಡರು.

## ಅನಂತ ಚೇತನ ಸೆಪ್ಟೆಂಬರ್ ತಿಂಗಳ ಸಂಚಿಕೆ


ಅನಂತ ಚೇತನ

ಹೊಗೆಯಿಂದ ಶಾಯಿ:

ಮರಗಳು ಪರಸ್ಪರ ಮಾತನಾಡುತ್ತವೆಯೇ?

ಗೆಲುವಿನ ಹಬ್ಬ ವಿಜಯದಶಮಿ

ಅದಮ್ಯ ಚೇತನ

ಅನಂತಪಥ

Published by: Tejaswini Ananthkumar

Inputs : | T S Gopal | Poornaprajna| Trivikram Joshi

Acknowldegements: Nayana S | K Janardhan Thunga

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04

Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.